# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**
**(ನಾಮನಿರ್ದೇಶನ ಹೊಂದಿದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 154**

**ಉತ್ತರಿಸಬೇಕಾದ ದಿನಾಂಕ : 05.12.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಶ್ರೀ ಗುರುಸಾರ್ವಭೌಮ ಸೌಹಾರ್ದ ಸಹಕಾರಿ ಸಂಘ, ಶ್ರೀ ವಶಿಷ್ಠ ಸೌಹಾರ್ದ ಸಹಕಾರಿ ಸಂಘಗಳಲ್ಲಿನ ಆರ್ಥಿಕ ಅವ್ಯವಹಾರ ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಬಿಐಗೆ ವಹಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ; | **ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್**:<br>ಈ ಬ್ಯಾಂಕಿನ ಅವ್ಯವಹಾರದ ಗ್ರಾತವು ಅಗಾಧವಾಗಿದ್ದು ಬ್ಯಾಂಕಿನ ಪದಾಧಿಕಾರಿಗಳು, ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸಾರ್ವಜನಿಕರಿಂದ ಅಪಾರ ಪ್ರಮಾಣದಲ್ಲಿ ಹಣವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಿ ವಾಪಸ್ಸು ನೀಡದೇ ವಂಚನೆ ಎಸಗಿದ್ದು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುವ ಅಗತ್ಯತೆ ಇರುವುದರಿಂದ ಈ ಪ್ರಕರಣದ ವಿಚಾರಣೆಯನ್ನು ಸಿ.ಬಿ.ಐ ಗೆ ವಹಿಸುವ ಬಗ್ಗೆ ದಿನಾಂಕ: 17-01-2023 ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.<br><br>ಅದರಂತೆ, ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್, ಬೆಂಗಳೂರು, ಇಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸಿ.ಬಿ.ಐ. ತನಿಖೆಗೆ ವಹಿಸುವ ಸಂಬಂಧ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಆಂಗ್ಲ ಭಾಷೆಯಲ್ಲಿ ಸಲ್ಲಿಸಲು ದಿನಾಂಕ:01-04-2023 ರಂದು ಸೂಚಿಸಿದ್ದು, ಈ ಸಂಬಂಧ ದಿನಾಂಕ: 04-05-2023 ರಂದು ಸಂಪೂರ್ಣ ದಾಖಲೆಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿ ಕೊಡುವಂತೆ ನಿರ್ದೇಶಕರು, ಭಾಷಾಂತರ ಇಲಾಖೆ, ಬೆಂಗಳೂರು, ಇವರಿಗೆ ಪತ್ರ ಬರೆಯಲಾಗಿತ್ತು.<br><br>ಭಾಷಾಂತರ ಇಲಾಖೆ ನಿರ್ದೇಶಕರು ಭಾಷಾಂತರಕ್ಕೆ ನೀಡಿರುವ ದಾಖಲೆಗಳು ಅಗಾಧವಾಗಿದ್ದು, ಮಾನವ ಸಂಪನ್ಮೂಲದ ಕೊರತೆ ಇರುವುದರಿಂದ, ಕರ್ನಾಟಕ ಸರ್ಕಾರ ಅಧಿಸೂಚಿಸಿರುವ ಭಾಷಾಂತರಕಾರರನ್ನು ಸಂಪರ್ಕಿಸಿ, ಭಾಷಾಂತರಕ್ಕೆ ತಗಲುವ ಖರ್ಚು ವೆಚ್ಚಗಳನ್ನು ತಮ್ಮ ಇಲಾಖೆಯೇ ಭರಿಸಿ ಅನುವಾದ ಕಾರ್ಯ ಮಾಡಿಕೊಳ್ಳಬೇಕೆಂದು ಹಿಂಬರಹ ನೀಡಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ದಿನಾಂಕ: 19-06-2023 ರಂದು ಬ್ಯಾಂಕಿಗೆ ಸಂಬಂಧಿಸಿದ ದಾಖಲೆಗಳನ್ನು ಆಂಗ್ಲ ಭಾಷೆಗೆ ಅನುವಾದಿಸಲು ಸರ್ಕಾರ ಹೊರಡಿಸಿರುವ ಅಧಿಸೂಚಿತ ಭಾಷಾಂತರಕಾರರಿಗೆ ನೀಡಲಾಗಿದೆ. ಅಧಿಸೂಚಿತ ಭಾಷಾಂತರಕಾರರು ದಿನಾಂಕ:26-07-2023 ರಂದು ಅನುವಾದಿತ ದಾಖಲೆಗಳನ್ನು ಸಲ್ಲಿಸಿರುತ್ತಾರೆ. |

| | | |
|---|---|---|
| | | **ಶ್ರೀ ಗುರು ಸಾರ್ವಭೌಮ ಸೌಹಾರ್ದ ಸಹಕಾರಿ ಮತ್ತು ಶ್ರೀ ವಶಿಷ್ಠ ಸೌಹಾರ್ದ ಸಹಕಾರಿ :**<br><br>ಈ ಸಂಘಗಳಲ್ಲಿನ ಆರ್ಥಿಕ ಅವ್ಯವಹಾರ ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಬಿಐ ಸಂಸ್ಥೆಗೆ ವಹಿಸುವ ಸಂಬಂಧ ದಾಖಲಾತಿಗಳನ್ನು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿ ದಾಖಲೆಗಳನ್ನು ದಿನಾಂಕ: 21-8-2023 ಮತ್ತು ದಿನಾಂಕ: 31-8-2023 ರಂದು ಸಲ್ಲಿಸಿರುತ್ತಾರೆ.<br><br>ಸಿ.ಬಿ.ಐಗೆ ವಹಿಸುವ ಸಂಬಂಧ ದಿನಾಂಕ: 07.09.2023 ರಂದು ಸಹಕಾರ ಇಲಾಖೆಯಿಂದ ಗೃಹ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಕಡತ ಸಲ್ಲಿಸಲಾಗಿತ್ತು.<br><br>ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 67 ಸಿಒಡಿ 2023, ದಿನಾಂಕ:02-12-2023 ರಂತೆ ಪ್ರಕರಣವನ್ನು ಸಿ.ಬಿ.ಐ ತನಿಖೆಗೆ ವಹಿಸಿ ಆದೇಶಿಸಿದೆ.<br><br>ಸರ್ಕಾರದ ಆದೇಶವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಕಳೆದ 150 ನೇ ಅಧಿವೇಶನದಲ್ಲಿ ದಿನಾಂಕ: 17.07.2023 ರ ಉಪವೇಶನದಲ್ಲಿ ಸರ್ಕಾರವು ಈ ಸೂಚನೆಗೆ ಉತ್ತರಿಸುತ್ತಾ ಈ ಸರ್ಕಾರವು ಎಲ್ಲಾ ಪ್ರಕರಣಗಳನ್ನು ಭಾಷಾಂತರ ಪ್ರಕ್ರಿಯೆ ಮುಗಿದ ತಕ್ಷಣ ಸಿಬಿಐ ತನಿಖೆಗೆ ವಹಿಸುವುದಾಗಿ ಸದನಕ್ಕೆ ಭರವಸೆಯನ್ನು ನೀಡಿ ನಾಲ್ಕು ತಿಂಗಳು ಕಳೆದರೂ ಆಗದೆ ವಿಳಂಬವಾಗಿರುವುದರಿಂದ ಯಾವ ಕಾಲಮಿತಿಯಲ್ಲಿ ಸದರಿ ಪ್ರಕರಣಗಳನ್ನು ನೀಡಿ ನಾಲ್ಕು ತನಿಖೆಗೆ ವಹಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ ಹಾಗೂ ಕೈಗೊಂಡಿರುವ ಸ್ಪಷ್ಟ ನಿಲುವುಗಳೇನು? (ಸಂಪೂರ್ಣ ವರದಿಯನ್ನು ನೀಡುವುದು) | ಈಗಾಗಲೇ ಪ್ರಕರಣವನ್ನು ಸಿ.ಬಿ.ಐ ತನಿಖೆಗೆ ವಹಿಸಿ ಆದೇಶಿಸಿರುವುದರಿಂದ ಯಾವುದೇ ವಿಳಂಬದ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಸಿಒ 64 ಸಿಆರ್‌ಸಿ 2023**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

# PROCEEDINGS OF GOVERNMENT OF KARNATAKA

Subject: Entrusting the investigation to Central Bureau of Investigation regarding multi-crore fraud committed by the Directors, Chief Executives and Staff members of the Management Board of Sri Guru Raghavendra Co-operataive Bank Limited , Bengaluru, Sri Guru Sarvabahuma Souharda Credit Co-operative, Bengaluru and Sri Vasista Credit Souharda Co-operative Limited, Bengaluru.

Read: Co-operation Department File No: CO 14 CRC 2023.

Preamble:

In the Co-operation Department file read above, the Co-operation Department has requested to hand over the case regarding multi-crore fraud committed by the Directors, Chief Executives and Staff members of the Management Board of Sri Guru Raghavendra Co-operative Bank Limited, Bengaluru, Sri Vasista Credit Souharda Co-operative Limited, Bengaluru and Sri Guru Sarvabahuma Souharda Credit Co-operative, Bengaluru to the CBI agency.

Accordingly, the Government has decided to hand over the investigation of the above said multi-crore fraud cases to the Central Bureau of Investigation.

Hence the following order.

## GOVERNMENT ORDER NO. HD 67 COD 2023, BENGALURU, DATED:02/12/2023.

Government of Karnataka hereby accords sanction to the Central Bureau of Investigation, under Section (6) of Delhi Special Police Establishment Act, 1946 for;

(i) Investigation of multi-crore fraud committed by the Directors, Chief Executives and Staff members of the Management Board of Sri Guru Raghavendra Co-operative Bank Limited, Bengaluru, Sri Vasista Credit Souharda Co-operative Limited, Bengaluru and Sri Guru Sarvabahuma Souharda Credit Co-operative, Bengaluru.

(ii) Identification and investigation by Central Bureau of Investigation of persons involved in connection with the alleged fraud.

The concerned Department Officers/Officials/others shall hand over data/information/records as and when required by the Central Bureau of Investigation and provide place, resources, manpower and logistic support including Camp Office and Vehicles to CBI in connection with the case.

By Order & in the name of the
Governor of Karnataka

B.K.B 2/12/23

(B.K.BHUVANENDRA KUMAR)
Under Secretary to Government,
Home Department(Crimes).

**Copy To:**

1. The Secretary, Government of India, Department of Personnel and Training(DoPT), North Block, New Delhi-110 001.

..2

2. Central Bureau of Investigation, Ganganagar, Bengaluru.
3. Director General and Inspector General of Police Karnataka State, No.02, Nrupathunga Road, Bengaluru.
4. Additional Chief Secretary to Government, Co-operation Department, M.S Building, Bengaluru.
5. Registrar of Co-operative Societies, No.01, Ali Askar Road, Bengaluru-560052.

**Copy for information:**

1. PS to Chief Secretary to Government of Karnataka, Vidhana Soudha Bengaluru.
2. PS to Additional Chief Secretary to Hon'ble Chief Minister of Karnataka, Vidhana Soudha, Bengaluru.
3. PS to Hon'ble Home Minister, Vidhana Soudha, Bengaluru.
4. PS to Hon'ble Minister of Co-operation, Vidhana Soudha, Bengaluru.
5. PS to *Additional Chief Secretary to Government, Home Department*, Vidhana Soudha, Bengaluru.
6. PS to Principal Secretary to Government(PCAS), Home Department, Vidhana Soudha, Bengaluru.
7. PA to Deputy Secretary to Government (Crimes, Prisons & Cinema), Vidhana Soudha, Bengaluru.
8. Guard File/Spare copies